ಬೆಂಗಳೂರು ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಪಟ್ಟಣಗೆರೆ ಗ್ರಾಮಪಂಚಾಯಿತಿಯ ಕೆಂಚೇನಹಳ್ಳಿ ಗ್ರಾಮದ ಹರಿಜನರ ರುದ್ರಭೂಮಿಯ ವಿಸ್ತೀರ್ಣ

481 - ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಪಟ್ಟಣಗೆರೆ ಗ್ರಾಮ ಪಂಚಾಯಿತಿಯ ಕೆಂಚೇನಹಳ್ಳಿ ಗ್ರಾಮದ ಹರಿಜನರ ಸ್ಮಶಾನದ (ರುದ್ರಭೂಮಿಯ)ವಿಸ್ತೀರ್ಣವೆಷ್ಟು?

ಆ) ಈ ಜಾಗವನ್ನು ಅಕ್ಕಪಕ್ಕದ ಭೂ ಮಾಲೀಕರು ಅಕ್ರಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ ಇದರ ಬಗ್ಗೆ ಕ್ರಮ ಕೈಗೊಂಡು ಸದರಿ ಜಾಗವನ್ನು ಹರಿಜನರಿಗಗೆ ಮೀಸಲಿಡುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೂಡಬಿದರೆ ಗ್ರಾಮಲೆಕ್ಕಿಗರ ಕೊರತೆ

326 - ಶ್ರೀ ಸೋಮಪ್ಪ ಸುವರ್ಣ (ಮುಲ್ಕಿ: ಮೂಡಬಿದರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದರೆ ಕ್ಷೇತ್ರದಲ್ಲಿ ಎಷ್ಟು ಗ್ರಾಮ ಲೆಕ್ಕಿಗರ ಹುದ್ದೆಗಳು ಖಾಲಿಯಿರುವುವುಯ

ಆ) ಹಾಗಿದ್ದಲ್ಲಿ, ಅಲ್ಲಿನ ಗ್ರಾಮ ಲೆಕ್ಕಿಗರ ಕೊರತೆಯಿಂದ ನಾನಾ ಕಾರ್ಯಗಳನ್ನು ಜಾರಿಗೆ ತರಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಆ ಹುದ್ದೆಗಳನ್ನು ಭರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ

ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):

ಅ) 6

ಆ) ಹೌದು.

ಇ) ಶ್ರೇಷ್ಟ ನ್ಯಾಯಲಯದ ಆದೇಶದ ಪ್ರಕಾರ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡು ಹೆಚ್ಚುವರಿಯಾದ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಆದಷ್ಟು ಬೇಗ ಭರ್ತಿ ಮಾಡಲಾಗುವುದು.

ಮೂಲ್ಕಿ ಉಪ-ನೋಂದಣಿ ಕಛೇರಿ ಕಟ್ಟಡ ಸ್ಥಳಾಂತರ

328 - ಶ್ರೀ ಸೋಮಪ್ಪ ಸುವರ್ಣ(ಮೂಡಬಿದರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?